## **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಬೆಂಗಳೂರು ಕೇಂದ್ರೀಯ ವಿಭಾಗ : ಬೆಂಗಳೂರು**

ಕ್ರಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/ 1793 /16-17 ದಿ: 04-11-2016

### **" ಇ-ಟೆಂಡರ್ / ಹರಾಜು ಪ್ರಕಟಣೆ ಸಂಖ್ಯೆ / 07 /2016 "**
### **(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ನೆಲಮಂಗಲ ಬಸ್ ನಿಲ್ದಾಣದ ಮುಖ್ಯ ಕಟ್ಟಡದಲ್ಲಿ ಖಾಲಿಯಾಗುವ ಮಳಿಗೆ ಸಂಖ್ಯೆ-02ಕ್ಕೆ (ಸಾಮಾನ್ಯ ವರ್ಗ) ಹಾಗೂ ಸದರಿ ಬಸ್ ನಿಲ್ದಾಣದ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆ ಸಂಖ್ಯೆ: 10ಕ್ಕೆ (ಪರಿಶಿಷ್ಟ ಜಾತಿ) ಪರವಾನಿಗೆದಾರರನ್ನು ಆಯ್ಕೆಮಾಡಲು ದಿನಾಂಕ: 25-11-2016 ರಂದು ಇ-ಟೆಂಡರ್-ಕಂ-ಹರಾಜು ನಡೆಸಲು ನಿಗದಿಪಡಿಸಲಾಗಿದೆ. ಆಸಕ್ತಿಯುಳ್ಳವರು ಅರ್ಜಿಗಳನ್ನು / ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.in ಮುಖಾಂತರ ದಿನಾಂಕ: 08-11-2016 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಜಿಗಳನ್ನು ಮತ್ತು ಪಾವತಿಸಿರುವ ಇ.ಎಂ.ಡಿ ಮೊತ್ತ ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು 22-11-2016 ರಂದು 12:00 ಗಂಟೆಯವರೆಗೆ ಸಲ್ಲಿಸಬಹುದು. ದಿನಾಂಕ: 25-11-2016 ರಂದು 11.00 ಗಂಟೆಯಿಂದ ಹರಾಜು ನಡೆಸಲಾಗುವುದು. ಹರಾಜಿನ ನಂತರ ಟೆಂಡರ್ ತೆರೆಯಲಾಗುವುದು. ಮಳಿಗೆಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ಮಳಿಗೆಯ ವಿವರಗಳು | ವಿಸ್ತೀರ್ಣ | ಮಾಸಿಕ ಶುಲ್ಕ | ಇ.ಎಂ.ಡಿ ಮೊತ್ತ | ಮೀಸಲಾತಿಯ ವಿವರ |
|---|---|---|---|---|---|
| 1 | ಮಳಿಗೆ ಸಂಖ್ಯೆ-10 (ವಾ.ಸಂಕೀರ್ಣ) | 118 (ಚ.ಅ.ಗಳಲ್ಲಿ | ರೂ.33,094-0 | ರೂ. 99,282-00 | ಪರಿಶಿಷ್ಟ ಜಾತಿ |
| 2 | ಮಳಿಗೆ ಸಂಖ್ಯೆ-02 (ಮುಖ್ಯ ಕಟ್ಟಡ) | 112 (ಚ.ಅ.ಗಳಲ್ಲಿ | ರೂ.10,254-0 | ರೂ. 30,762-00 | ಸಾಮಾನ್ಯ ವರ್ಗ |

**ಇ-ಟೆಂಡರ್-ಕಂ-ಹರಾಜು ಎರಡರಲ್ಲೂ ಅರ್ಜಿ ಸಲ್ಲಿಸುವವರು ಪ್ರತ್ಯೇಕವಾಗಿ ಇ.ಎಂ.ಡಿ ಮೊತ್ತವನ್ನು ಮತ್ತು ಸಂಬಂದಪಟ್ಟ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಪಾವತಿಸಬೇಕಾಗಿರುತ್ತದೆ. ಸಲ್ಲಿಸಿರುವ ಅರ್ಜಿಗಳು ಸಂಸ್ಥೆಯ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಅಪೂರ್ಣವಾಗಿದ್ದಲ್ಲಿ ತಿರಸ್ಕರಿಸಲಾಗುವುದು. ಯಾವುದೇ ಕಾರಣ ನೀಡದೇ ಇ-ಟೆಂಡರ್-ಕಂ-ಹರಾಜು ನಡೆಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.** ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ, ಶಾಂತಿನಗರ, ಬೆಂಗಳೂರು-560027 ರಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. (ಸಹಾಯಕ ಸಂಚಾರ ವ್ಯವಸ್ಥಾಪಕರು ದೂ. ಸಂ. 7760990029 & ಸಹಾಯಕ ಸಂಚಾರ ಅಧೀಕ್ಷಕರು-7760990261).

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾ.ರ.ಸಾ. ನಿಗಮ,
ಬೆಂಗಳೂರು ಕೇಂದ್ರೀಯ ವಿಭಾಗ.
ಬೆಂಗಳೂರು.